**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ** 10003/2024

ಪಿಡಬ್ಲೂ– 1

ಸಿಡಬ್ಲೂ– 1

ಸಾಕ್ಷಿ ಹೆಸರು – ಚಂದ್ರಪ್ಪ

ತಂದೆ ಹೆಸರು – ಗದಿಗೆಪ್ಪ

ವಯಸ್ಸು – 56 ವರ್ಷ

ಉದ್ಯೋಗ – ವ್ಯವಸಾಯ

ವಾಸಃ – ತಲಗುಂದ ಗ್ರಾಮ, ಸೊರಬ ತಾಲ್ಲೂಕು

**ಪ್ರಮಾಣ ವಚನ ಭೋದಿಸಿದ ದಿನಾಂಕಃ 23–07–2025.**

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>**

1 ನೇ ಆರೋಪಿ ನನ್ನ ಅಣ್ಣ. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯ ಮಕ್ಕಳು. ಮೃತೆ ನಿರ್ಮಲಾ ಪಿ. ಡಿ. ನನ್ನ ಹೆಂಡತಿ. ತಾರಮ್ಮ ನನ್ನ ಅತ್ತಿಗೆ. ನನ್ನ ತಂದೆ ತಾಯಿಗೆ 7 ಜನ ಗಂಡು ಮಕ್ಕಳು, 4 ಜನ ಹೆಣ್ಣು ಮಕ್ಕಳು. ಎಲ್ಲಾ ಸಹೋದರರು ಬೇರೆ ಬೇರೆ ವಾಸ ಮಾಡಿಕೊಂಡಿರುತ್ತೇವೆ. 16 ವರ್ಷಗಳ ಹಿಂದೆ ನಾನು ನಿರ್ಮಲ ಪಿ ಡಿ ಯವರನ್ನು ಮದುವೆಯಾಗಿರುತ್ತೇನೆ. ನಮಗೆ ಒಂದು ಗಂಡು ಮಗು ಮತ್ತು ಒಂದು ಹೆಣ್ಣು ಮಗು ಇರುತ್ತಾರೆ. ಗಂಡು ಮಗನ ಹೆಸರು ಮನೋಜ್ ಮತ್ತು ಹೆಣ್ಣು ಮಗಳ ಹೆಸರು ವರ್ಷಿಣಿ. ನಮ್ಮ ಸಹೋದರರಲ್ಲಿ 4 ಜನ ಸರ್ವೆ ನಂಬರ್ 8 ಮತ್ತು 9 ರಲ್ಲಿರುವ ಬಗರ್ ಹುಕುಂ ಜಮೀನಿಗೆ ಜಮೀನನ್ನು ಮಂಜೂರಾತಿ ಮಾಡಬೇಕೆಂದು ಅರ್ಜಿಯನ್ನು

ಸಲ್ಲಿಸಿದ್ದರು. ಅವರು ಯಾರೆಂದರೆ ಸದಾಶಿವಪ್ಪ , ಲಕ್ಷ್ಮಣಪ್ಪ, ಜಯಶೀಲಪ್ಪ ಮತ್ತು ಪರಶುರಾಮಪ್ಪ. ಸದರಿ ನಾಲ್ಕು ಜನರಿಗೆ ಮಂಗಾಪುರದಲ್ಲಿರುವ ಸ.ನಂ. 8 ಮತ್ತು 9 ರಲ್ಲಿ ಜಮೀನು ಮಂಜೂರಾಗಿರುತ್ತದೆ. ನಾನು ತಲಗುಂದ ಗ್ರಾಮದಲ್ಲಿರುವ ಸ.ನಂಃ 242 ರಲ್ಲಿ 2 ಎಕರೆ ಬಗರ್ ಹುಕುಂ ಜಮೀನಿಗೆ 1990-91 ರಲ್ಲಿ ಅರ್ಜಿ ಸಲ್ಲಿಸಿದ್ದೆನು. ಸದರಿ ಜಮೀನಿನಲ್ಲಿ ಸಾಗುವಳಿ ನಾನೇ ಮಾಡಿಕೊಂಡು ಬರುತ್ತಿದ್ದೇನೆ.

ಈ ಜಮೀನಿಗೆ ಸಂಬಂಧಪಟ್ಟಂತೆ ನನ್ನ ಹಾಗೂ 1 ನೇ ಆರೋಪಿಯ ನಡುವೆ ಜಮೀನು ವಿವಾದ ಇರುತ್ತದೆ. ಈ ವಿವಾದ ಸಂಬಂಧಪಟ್ಟಂತೆ ಆರೋಪಿತರು ನನಗೆ ಮತ್ತು ನನ್ನ ಹೆಂಡತಿಗೆ ಹೊಡೆಯುವುದು, ಬೈಯ್ಯುವುದು ಮಾಡುತ್ತಿದ್ದರು. ನಾವು ಆರೋಪಿತರಿಗೆ ಜಮೀನು ಕೊಡುವುದಿಲ್ಲ ಎಂದು ಹೇಳಿದ್ದೆವು. ಆರೋಪಿತರು ನನ್ನ ಹೆಂಡತಿಗೆ ಜಮೀನು ಕೊಡಬೇಕು ಇಲ್ಲ ಅಂದರೆ ನಿಮ್ಮನ್ನು ಹೊಡೆದು ಸಾಯಿಸುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದರು.

ದಿನಾಂಕಃ 25-07-2021 ರಂದು ಸದರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾಗ 1 ಮತ್ತು 2 ನೇ ಆರೋಪಿತರು ನಮ್ಮ ಜಮೀನಿಗೆ ಬಂದು ಜಮೀನಿನಲ್ಲಿ ಬಿತ್ತನೆ ಮಾಡಬೇಡಿ ಎಂದು ಟ್ರ್ಯಾಕ್ಟರ್ ನ್ನು ತಡೆದರು. ನಾವು ಆರೋಪಿತರನ್ನು ಜಮೀನಿನಿಂದ ಹೊರಗೆ ಕಳಿಸಿ ಬಿತ್ತನೆ ಮಾಡಿರುತ್ತೇವೆ. ಆ ಸಂದರ್ಭದಲ್ಲಿ ನಾನು ಆನವಟ್ಟಿ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ನಾನು ದೂರು ಕೊಟ್ಟಾಗ ಪೋಲೀಸರು ಆರೋಪಿತರಿಗೆ ನಮ್ಮ ಜಮೀನಿಗೆ ಹೋಗಬೇಡಿ ಎಂದು ತಿಳುವಳಿಕೆ ಹೇಳಿದರು. ಅದಾದ ನಂತರ ಪ್ರತಿ ವರ್ಷ ಸದರಿ ಜಮೀನಿನಲ್ಲಿ ನಾವು ಬೆಳೆಯನ್ನು

ಬೆಳೆಯುತ್ತಿದ್ದೆವು. ನಂತರ ನನ್ನ ಅಣ್ಣ ತಾಲ್ಲೂಕು ಕಛೇರಿಗೆ ಹೋಗಿ ಸದರಿ ಜಮೀನನ್ನು ತನ್ನ ಹೆಂಡತಿ ತಾರಮ್ಮನ ಹೆಸರಿಗೆ ಮಾಡಿಕೊಡಿ ಎಂದು ಹಣವನ್ನು ಕಟ್ಟಿ ಸರ್ವೆಯವರಿಂದ ವರದಿಯನ್ನು ತೆಗೆದುಕೊಂಡಿರುತ್ತಾರೆ. ಸದರಿ ವಿಚಾರ ಗೊತ್ತಾಗಿ ನಾನು ನನ್ನ ಅಣ್ಣನ ಹೆಂಡತಿಯ ಹೆಸರಿಗೆ ಜಮೀನು ಮಂಜೂರು ಮಾಡಬೇಡಿ ಎಂದು ತಕರಾರು ಸಲ್ಲಿಸಿದ್ದೆ. ಆಗ ಆರೋಪಿತರು ನನ್ನ ಮೇಲೆ ಮತ್ತು ನನ್ನ ಹೆಂಡತಿ ಮೇಲೆ ಜಗಳ ಮಾಡುತ್ತಿದ್ದರು. ನನ್ನ ಹೆಂಡತಿ ಆರೋಪಿತರಿಗೆ ನಿಮಗೆ 2-3 ಸರ್ವೆ ನಂಬರ್ ನಲ್ಲಿ ಜಮೀನು ಇರುತ್ತದೆ, ನಮ್ಮ ಬಳಿ ಜಮೀನು ಕೇಳಬೇಡಿ ಎಂದು ಹೇಳುತ್ತಿದ್ದಳು. ಆರೋಪಿತರು ನನ್ನ ಹೆಂಡತಿಗೆ ನಿನ್ನನ್ನು ಹೊಡೆಯುತ್ತೇನೆ ಮತ್ತು ಕಡಿಯುತ್ತೇನೆ ಎಂದು ಬೆದರಿಕೆ ಹಾಕಿದರು. ಆರೋಪಿತರು ನನಗೆ ನೀನು ಜಮೀನು ಹೇಗೆ ತೆಗೆದುಕೊಳ್ಳುತ್ತೀಯೋ ನಾವು ನೋಡುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದರು.

ದಿನಾಂಕಃ 19-11-2021 ರಂದು ನಾನು ಬನವಾಸಿಗೆ ಸೆಂಟ್ರಿಂಗ್ ಕೆಲಸ ಮಾಡಲು ಹೋದೆ. ನಂತರ ದಿನಾಂಕಃ 20-11-2021 ರಂದು ಆರೋಪಿತರು ಬೆಳಿಗ್ಗೆ 10 ಗಂಟೆಗೆ ನಮ್ಮ ಮನೆಯ ಹತ್ತಿರ ಬಂದು, ನನ್ನ ಹೆಂಡತಿ ಮೃತೆ ನಿರ್ಮಲಾ ಪಿ ಡಿ ರವರ ಮೇಲೆ ಗಲಾಟೆ ಮಾಡಿ ನಿನ್ನನ್ನು ಸಾಯಿಸುತ್ತೇವೆ, ಆಗ ನಮಗೆ ಜಮೀನು ಸಿಗುತ್ತದೆ ಎಂದು ಬೆದರಿಕೆ ಹಾಕಿರುತ್ತಾರೆ. ಆ ಸಮಯದಲ್ಲಿ ಗ್ರಾಮದವರು ಬಂದು ಜಗಳ ಬಿಡಿಸಿ ಆರೋಪಿತರನ್ನು ಕಳಿಸಿರುತ್ತಾರೆ. ಸದರಿ ವಿಚಾರವನ್ನು ನನ್ನ ಹೆಂಡತಿ ಆಕೆಯ ಅಣ್ಣ ಮಂಜಪ್ಪ ನಿಗೆ ತಿಳಿಸಿರುತ್ತಾಳೆ. ಆಗ ಮಂಜಪ್ಪನವರು ನನ್ನ ಹೆಂಡತಿಗೆ ಸಮಾಧಾನ ಹೇಳಿರುತ್ತಾರೆ. ದಿನಾಂಕಃ 22-11-2021 ರಂದು ನನ್ನ ಹೆಂಡತಿ ನನಗೆ ಕರೆ ಮಾಡಿ ಸದರಿ ವಿಚಾರವನ್ನು ಹೇಳಿದಳು. ಅದಕ್ಕೆ ನನ್ನ ಹೆಂಡತಿಗೆ ನಾನು ಬರುತ್ತೇನೆ, ಅಲ್ಲಿಯವರೆಗೂ ಸುಮ್ಮನಿರು

ಮಾತನಾಡಬೇಡ ಎಂದು ಹೇಳಿದೆ. ದಿನಾಂಕಃ 24-11-2021 ರಂದು ಸಂಜೆ 7 ಗಂಟೆಗೆ ಬನವಾಸಿಯಿಂದ ನಮ್ಮ ಮನೆಗೆ ಬಂದೆ. ನಾನು ಮನೆಗೆ ಬಂದಾಗ ನನ್ನ ಹೆಂಡತಿ ಇರಲಿಲ್ಲ. ನಾನು ನನ್ನ ಮಕ್ಕಳನ್ನು ವಿಚಾರ ಮಾಡಿದೆ. ಅವರು ಶಾಲೆಯಿಂದ ಮನೆಗೆ ಬಂದಾಗ ಮನೆ ಬಾಗಿಲು ತೆಗೆದಿದ್ದು ಅಮ್ಮ ಮನೆಯಲ್ಲಿ ಇರಲಿಲ್ಲ ಎಂದು ಹೇಳಿದರು. ಆಗ ನಾನು ಮತ್ತು ನಮ್ಮ ಗ್ರಾಮಸ್ಥರಾದ ಮಹೇಂದ್ರ, ಕೆರಿಯಪ್ಪ, ಅಜ್ಜಣ್ಣಕುಮಾರ ಎಲ್ಲರೂ ಸೇರಿಕೊಂಡು ನನ್ನ ಹೆಂಡತಿ ನಿರ್ಮಲಾಳನ್ನು ಹುಡುಕಿದೆವು. ಆದರೂ ಸಿಗಲಿಲ್ಲ. ದಿನಾಂಕಃ 25-11-2021 ರಂದು ಬೆಳಿಗ್ಗೆ 7-00 ಗಂಟೆಗೆ ನಮ್ಮ ಮನೆಯ ಹಿಂಭಾಗದ ಬಾವಿಯಲ್ಲಿ ನನ್ನ ಹೆಂಡತಿಯ ಶವ ನೋಡಿದೆ. ತಕ್ಷಣ ನಾನು ಮಹೇಂದ್ರ, ಗಣೇಶ, ಅಜ್ಜಣ್ಣಕುಮಾರ ಎಲ್ಲರೂ ಸೇರಿ ಶವವನ್ನು ಬಾವಿಯಿಂದ ತೆಗೆದು ಆನವಟ್ಟಿ ಸರ್ಕಾರಿ ಆಸ್ಪತ್ರೆಗೆ ಬಂದೆವು. ನನ್ನ ಹೆಂಡತಿಯ ಸಾವಿಗೆ ಆರೋಪಿತರೇ ಕಾರಣ ಎಂದು ನಾನು ಆನವಟ್ಟಿ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು.

ದೂರು ಕೊಟ್ಟ ನಂತರ ಪೋಲೀಸರು ಆಸ್ಪತ್ರೆಗೆ ಬಂದು ನನ್ನ ಹೆಂಡತಿಯ ಶವ ನೋಡಿ ಶವಪಂಚನಾಮೆ ಮಾಡಿರುತ್ತಾರೆ. ಶವ ಪಂಚನಾಮೆ ಸಮಯದಲ್ಲಿ ಪೋಲೀಸರು ಫೋಟೋವನ್ನು ತೆಗೆದಿರುತ್ತಾರೆ. ಅದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ2 ಎಂದು ಗುರುತಿಸಲಾಯಿತು. ಶವದ ಮರಣೋತ್ತರ ಪರೀಕ್ಷೆ ಆದ ಮೇಲೆ ಶವವನ್ನು ಪೋಲೀಸರು ನನ್ನ ಸುಪರ್ಧಿಗೆ ನೀಡಿರುತ್ತಾರೆ. ಸದರಿ ಶವ ಸಂದಾಯ ರಶೀದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ3 ಎಂದು ಸಾಕ್ಷಿಯ ಸಹಿಯನ್ನು ನಿಪಿ3(ಎ) ಎಂದು ಗುರುತಿಸಲಾಯಿತು. ನಂತರ ದಿನಾಂಕಃ 27-11-2021 ರಂದು ಪೋಲೀಸರು ನಮ್ಮ

ಮನೆಗೆ ಬಂದಿದ್ದರು. ಪೋಲೀಸರು ನಮ್ಮ ಮನೆಯ ಹತ್ತಿರ ಬಂದು ಮಹಜರ್ ಮಾಡಲು ಒಂದು ನೋಟೀಸ್ ನ್ನು ಜಾರಿ ಮಾಡಿದ್ದರು. ಸದರಿ ನೋಟೀಸ್ ನ್ನು ಈಗ ನೋಡುತ್ತಿದ್ದು ಅದನ್ನು ನಿಪಿ4 ಎಂದು ಸಾಕ್ಷಿಯ ಸಹಿಯನ್ನು ನಿಪಿ4(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿರುವುದರಿಂದ ಪ್ರಕರಣವನ್ನು ಮಧ್ಯಾಹ್ನ 3-00 ಗಂಟೆಗೆ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)**

**ಓ ಹೇ ಕೇ ಸ ಇದೆ**

**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಶಿವಮೊಗ್ಗ (ಪೀಠಾಸೀನ, ಸಾಗರ).**

**ಸಾಕ್ಷಿಯನ್ನು ಪುನಃ ಮದ್ಯಾಹ್ನ 3-00 ಗಂಟೆಗೆ ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.**

ಪೋಲೀಸರಿಗೆ ನಮ್ಮ ಮನೆಯ ಮುಂದೆ ಜಾಗವನ್ನು ತೋರಿಸಿ ಸದರಿ ಸ್ಥಳದಲ್ಲಿ ನನ್ನ ಹೆಂಡತಿಗೂ ಮತ್ತು ಆರೋಪಿತರ ನಡುವೆ ಜಗಳ ಆಗಿರುತ್ತದೆ ಎಂದು ಹೇಳಿರುತ್ತೇನೆ. ಆಗ ಆ ಸಂದರ್ಭದಲ್ಲಿ ಪೋಲೀಸರು ಮಹಜರ್ ಕ್ರಮ ಜರುಗಿಸಿರುತ್ತಾರೆ. ಮಹಜರ್ ದಾಖಲೆಗೆ ನಾನು ಸಹಿ ಹಾಕಿರುತ್ತೇನೆ. ಸದರಿ ಮಹಜರ್ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ5 ಎಂದು, ಸಾಕ್ಷಿಯ ಸಹಿಯನ್ನು ನಿಪಿ5(ಎ) ಎಂದು

ಗುರುತಿಸಲಾಯಿತು. ಸದರಿ ಮಹಜರ್ ನ್ನು ಬೆಳಿಗ್ಗೆ 10-30 ರಿಂದ 12-00 ಗಂಟೆವರೆಗೆ ಮಾಡಿರುತ್ತಾರೆ.

ನಂತರ ನಾನು ಪೋಲೀಸರಿಗೆ ನಮ್ಮ ಮನೆಯ ಹಿಂಭಾಗದಲ್ಲಿರುವ ಬಾವಿಯನ್ನು ತೋರಿಸಿ ಇದೇ ಬಾವಿಯಲ್ಲಿ ನನ್ನ ಹೆಂಡತಿಯ ಶವ ಬಿದ್ದಿತ್ತು ಎಂದು ತೋರಿಸಿದ ಮೇರೆಗೆ ಪೋಲೀಸರು ಮಹಜರ್ ಕ್ರಮ ಜರುಗಿಸಿ ಮಹಜರ್ ದಾಖಲೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಈಗ ತೋರಿಸಿದ ದಾಖಲೆ ಸದರಿ ಮಹಜರ್ ದಾಖಲೆ ಆಗಿರುತ್ತದೆ ಅದರಲ್ಲಿ ನನ್ನ ಸಹಿ ಇರುತ್ತದೆ. ಮಹಜರ್ ದಾಖಲೆಯನ್ನು ನಿಪಿ6 ಎಂದು, ಸಾಕ್ಷಿಯ ಸಹಿಯನ್ನು ನಿಪಿ6(ಎ) ಎಂದು ಗುರುತಿಸಲಾಯಿತು. ಪೋಲೀಸರು ಬಾವಿ ಹತ್ತಿರ ಸ್ಥಳದ ನಕಾಶೆಯನ್ನು ತಯಾರು ಮಾಡಿರುತ್ತಾರೆ. ನಕಾಶೆಗೆ ನಾನು ಸಹಿ ಮಾಡಿರುತ್ತೇನೆ. ನಕಾಶೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ7 ಎಂದು, ಸಾಕ್ಷಿಯ ಸಹಿಯನ್ನು ನಿಪಿ7(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಈ ದಿವಸ ಆರೋಪಿತರು ನ್ಯಾಯಾಲಯದ ಮುಂದೆ ಇರುತ್ತಾರೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಪಿ ಜಿ ವಕೀಲರಿಂದಃ**

ನಾನು 9 ನೇ ತರಗತಿವರೆಗೆ ಓದಿಕೊಂಡಿರುತ್ತೇನೆ. ನನ್ನ ಹೆಂಡತಿ ನಿರ್ಮಲ, ಬಿ ಎ ಪದವಿ ಮಾಡಿದ್ದಳು. ನನ್ನ ತಂದೆ ಈಗ ಮೃತಪಟ್ಟಿರುತ್ತಾರೆ. ನನ್ನ ತಾಯಿಯ ಹೆಸರು ಬಂಗಾರಮ್ಮ, ಅವರೂ ಸಹ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ ಗಂಡು ಮಕ್ಕಳಲ್ಲಿ ನಾನೇ ಕೊನೆಯ ಮಗ. ನನ್ನ ಅಣ್ಣಂದಿರಾದ ಕೃಷ್ಣಪ್ಪ ಮತ್ತು ಸುರೇಶ ರವರು ಬೇರೆ ಗ್ರಾಮದಲ್ಲಿ ವಾಸ ಮಾಡಿಕೊಂಡಿರುತ್ತಾರೆ. ನಮ್ಮ ಗ್ರಾಮದಲ್ಲಿರುವ ನನ್ನ ತಂದೆಯ ಆಸ್ತಿಯನ್ನು ನಾವು

ಅಣ್ಣ ತಮ್ಮಂದಿರು ಹಂಚಿಕೊಂಡಿರುತ್ತೇವೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸ.ನಂ.297, ಸ.ನಂ.101 ಹಾಗೂ ಸ.ನಂಃ 33 ರಲ್ಲಿರುವ ಜಮೀನುಗಳನ್ನು ನಾವು ಅಣ್ಣ ತಮ್ಮಂದಿರು ಹಂಚಿಕೊಂಡಿರುತ್ತೇವೆ. ಸದರಿ ಜಮೀನುಗಳು ನನ್ನ ತಂದೆಯ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸ.ನಂಃ 297 ಜಮೀನು ಮೊದಲಿನಿಂದಲೂ ಶಾಂತಾಚಾರಿರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಹಾಗೆಯೇ ಸ.ನಂಃ 33 ರ ಜಮೀನು ಮೊದಲಿನಿಂದಲೂ ನೀಲಮ್ಮ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸ.ನಂ 101 ರ ಜಮೀನು ಮಾತ್ರ ನನ್ನ ತಾಯಿ ಬಂಗಾರಮ್ಮನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ 1ನೇ ಆರೋಪಿ ಪರಶುರಾಮಪ್ಪ, ನನ್ನ ಸಹೋದರರಾದ ಜಯಶೀಲಪ್ಪ ಮತ್ತು ಸುರೇಶ ವ್ಯವಸಾಯ ಮಾಡುತ್ತಿರುತ್ತಾರೆ ಎಂದರೆ ಸರಿ. ಸ.ನಂಃ 242 ರಲ್ಲಿ ಒಟ್ಟು 7 ಎಕರೆ ಜಮೀನು ಇರುತ್ತದೆ. ನಮ್ಮ ಗ್ರಾಮದವರಾದ ಗುಡ್ಡಪ್ಪ ಮತ್ತು ರಾಮಪ್ಪ ಸದರಿ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ.

ಈಗ ತೋರಿಸಿದ ದಾಖಲೆ ನಾನು ಸ.ನಂ. 242 ರಲ್ಲಿ ಜಮೀನು ಮಂಜೂರು ಮಾಡಬೇಕು ಎಂದು ಅರ್ಜಿ ನೀಡಿದ ಬಗ್ಗೆ ರಶೀದಿ ಆಗಿರುತ್ತದೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ನಿ ಡಿ 1 ಎಂದು ಗುರುತಿಸಲಾಯಿತು. 1ನೇ ಆರೋಪಿಯ ಹೆಂಡತಿ ತಾರಮ್ಮ ಸ.ನಂಃ 242 ರಲ್ಲಿ 2 ಎಕರೆ ಜಮೀನು ಮಂಜೂರು ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ.

ನಾನು ಗೋವಾದಲ್ಲಿ ಎಷ್ಟು ವರ್ಷ ಇದ್ದೆ ಎಂದರೆ ಸಾಕ್ಷಿ ನನಗೆ ಸರಿಯಾಗಿ ನೆನಪಿಲ್ಲ ಎಂದು ಹೇಳುತ್ತಾರೆ. ನಾನು ಗೋವಾದಿಂದ ಬಂದ 2-3 ವರ್ಷದ ನಂತರ ಮೃತ

ನಿರ್ಮಲಾಳನ್ನು ಮದುವೆಯಾಗಿರುತ್ತೇನೆ. ಆ ಸಮಯದಲ್ಲಿ ನನ್ನ ಅಣ್ಣ ಜಯಶೀಲಪ್ಪ ಬದುಕಿದ್ದರು. ನಾನು ಗೋವಾದಲ್ಲಿದ್ದಾಗ ನನ್ನ ತಾಯಿ ಮರಣ ಹೊಂದಿರುತ್ತಾರೆ. ನಾನು ನನ್ನ ತಾಯಿಯ ಅಂತ್ಯಸಂಸ್ಕಾರಕ್ಕೆ ಬಂದಾಗ ಅದು ಮುಗಿದು ಹೋಗಿತ್ತು. ನನ್ನ ಅಣ್ಣ ಜಯಶೀಲಪ್ಪ ಮೃತಪಟ್ಟ ನಂತರ ಮನೆಯ ಹಿರಿಯತನವನ್ನು ನಾನು ಮಾಡುತ್ತಿದ್ದೆ. ಜಯಶೀಲಪ್ಪ ಮತ್ತು ನನ್ನ ತಾಯಿ ಸತ್ತ ಮೇಲೆ ನಾವು ಅಣ್ಣ ತಮ್ಮಂದಿರು ಜಮೀನನ್ನು ಭಾಗ ಮಾಡಿಕೊಂಡೆವು ಎಂದರೆ ಸಾಕ್ಷಿ ಮೊದಲೇ ಭಾಗ ಮಾಡಿಕೊಂಡಿದ್ದೆವು ಎಂದು ಹೇಳುತ್ತಾರೆ. ನಾವು ಅಣ್ಣ ತಮ್ಮಂದಿರು ಬಗರ್ ಹುಕುಂ ಜಮೀನಿನಲ್ಲಿ ಜಮೀನು ಮಂಜೂರು ಮಾಡಬೇಕೆಂದು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ . ಸ.ನಂ 8 ಮತ್ತು 9 ರ ಜಮೀನುಗಳಿಗೂ ಸಹ ನನ್ನ ಅಣ್ಣಂದಿರ ಜೊತೆ ನಾನೂ ಸಹ ಜಮೀನು ಮಂಜೂರು ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಮದುವೆಯಾದ ನಂತರ ನಾನು ವಾರಕ್ಕೆ 4 ದಿವಸ ಕೇರಳದಲ್ಲಿ ಕೆಲಸ ಮಾಡಿ ಮನೆಗೆ ವಾಪಾಸ್ಸು ಬರುತ್ತಿದ್ದೆ. ನನಗೆ ಸಾರಾಯಿ ಕುಡಿಯುವ ಅಭ್ಯಾಸ ಇರುವುದಿಲ್ಲ. ನಾನು ಯಾವತ್ತೂ ಸಹ ನಮ್ಮ ಕುಟುಂಬದ ಜಮೀನಾಗಲೀ ಅಥವಾ ಅಕ್ರಮ ಸಕ್ರಮ ಜಮೀನಾಗಲೀ ಸಾಗುವಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ7 ಮಹೇಂದ್ರ ರವರು ಗದ್ದೆ ಕೆಲಸ ಮತ್ತು ಮನೆ ಕಟ್ಟುವ ಕೆಲಸ ಮಾಡುತ್ತಾರೆ. ನಾನೂ ಸಹ ಮಹೇಂದ್ರನ ಜೊತೆಗೆ ಗದ್ದೆ ಕೆಲಸ ಮತ್ತು ಗಾರೆ ಕೆಲಸ ಮಾಡುತ್ತೇನೆ. ನಾನು ಮಹೇಂದ್ರನ ಜೊತೆ ಸುಮಾರು 8 ದಿವಸಗಳ ಕಾಲ ಕೆಲಸ ಮಾಡಲು ಹೊರಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನಾನು ವಾರಕ್ಕೆ 3 ದಿವಸ ಅಥವಾ 4 ದಿವಸ ಗಾರೆ ಕೆಲಸ ಮಾಡಲು

ಹೊರಗಡೆ ಹೋಗುತ್ತಿದ್ಧೆ. ನಾನು ಯಾವತ್ತೂ ಸಹ ಜಮೀನಿನಲ್ಲಿ ವ್ಯವಸಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ವಲ್ಪ ಬೇಜವಾಬ್ದಾರಿ ಮನುಷ್ಯ ಎಂದರೆ ಸರಿಯಲ್ಲ.

ನನ್ನ ಹೆಂಡತಿ ನಿರ್ಮಲಾ ಅವರಿಗೆ ತಂದೆ ತಾಯಿ ಇರುವುದಿಲ್ಲ. ನಿರ್ಮಲಾ ತಂದೆ ತಾಯಿಗೆ ಒಟ್ಟು 3 ಜನ ಗಂಡು ಮಕ್ಕಳು. ಅವರ ಹೆಸರು ಮಂಜಣ್ಣ , ಪರಶುರಾಮ ಮತ್ತು ಈರಪ್ಪ .

ಚಾಸಾ12 ಮಂಜಣ್ಣ ಗದ್ದೆ ಕೆಲಸ ಮಾಡುತ್ತಾರೆ. ಈರಪ್ಪ ಪೋಲೀಸ್ ಇಲಾಖೆಯಲ್ಲಿ ಇರುತ್ತಾರೆ. ಪರಶುರಾಮ ಎಂಬುವವರು ಸೊರಬದಲ್ಲಿ ಕೆಲಸ ಮಾಡುತ್ತಾರೆ. ಪರಶುರಾಮ ಎಂಬುವವರು ಸೊರಬ ನ್ಯಾಯಾಲಯದಲ್ಲಿ ಎಫ್ ಡಿ ಎ ಆಗಿ ಕರ್ತವ್ಯ ಮಾಡುತ್ತಿದ್ದಾರೆ ಎಂದರೆ ಸರಿ. ಲಕ್ಷ್ಮಣ ನನ್ನ ಅಣ್ಣ. ಅವರ ಮಗ ನಾಗರಾಜ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಪೋಲೀಸ್ ನಾಗರಾಜ 1 ನೇ ಆರೋಪಿ ರಮೇಶನ ಮನೆಗೆ ಕೆಲಸಕ್ಕೆ ಹೋಗಿದ್ದರು ಎಂದು ಹೇಳಿ 1 ನೇ ಆರೋಪಿಯ ಮೇಲೆ ಜಗಳ ತೆಗೆದು 1 ನೇ ಆರೋಪಿಯ ಮೇಲೆ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ವಿಚಾರ ಗೊತ್ತಿದ್ದರೂ ಸಹ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ನಮ್ಮ ಗ್ರಾಮದಲ್ಲಿ ವಾಸ ಮಾಡಿಕೊಂಡಿರುತ್ತಾರೆ. 3 ನೇ ಆರೋಪಿ ಸಾಗರದಲ್ಲಿ ವಾಸ ಮಾಡಿಕೊಂಡಿರುತ್ತಾರೆ.

ಘಟನೆ ನಡೆದ ಪೂರ್ವದಲ್ಲಿ ನಾನು ಊರಿನಲ್ಲಿ ಇರಲಿಲ್ಲ ಎಂದರೆ ಸರಿ. ದಿನಾಂಕಃ 19-11-2021 ರಂದು ನಾನು ಬನವಾಸಿಗೆ ಹೋಗಿರುತ್ತೇನೆ ಎಂದರೆ ಸರಿ. ದಿನಾಂಕಃ 24-11-2021 ರಂದು ನಾನು ಬನವಾಸಿಯಿಂದ ನನ್ನ ಮನೆಗೆ ಬಂದಿರುತ್ತೇನೆ. ಈ ಮಧ್ಯೆ ನಮ್ಮ ಮನೆಯಲ್ಲಿ ಮತ್ತು ನನ್ನ ಮನೆಯ ಹಿಂದೆ ಮುಂದೆ ಏನು ನಡೆಯಿತು ಎಂದು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸಾಕ್ಷಿ ನನ್ನ ಹೆಂಡತಿ ಫೋನ್ ಮಾಡಿ ನನಗೆ ವಿಚಾರ ತಿಳಿಸಿರುತ್ತಾಳೆ ಎಂದು ಹೇಳುತ್ತಾರೆ. ನಾನು ಬೇಜಾವಾಬ್ದಾರಿ ಮನುಷ್ಯ ಆಗಿದ್ದರಿಂದ ನಾನು ಆಗಾಗ ಮನೆ ಬಿಟ್ಟು ಹೊರಗೆ ಹೋಗುತ್ತಿದ್ದರಿಂದ ನನ್ನ ಮತ್ತು ನನ್ನ ಹೆಂಡತಿಯ ನಡುವೆ ಸಂಬಂಧ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಬನವಾಸಿಯಿಂದ ಮನೆಗೆ ಬಂದ ಮೇಲೆ ನನ್ನ ಮಗಳು ನನಗೆ ನನ್ನ ಹೆಂಡತಿ ಮನೆಯಲ್ಲಿ ಇರುವುದಿಲ್ಲ ಎಂದು ಹೇಳಿದಳು.

ನಾನು ಗುತ್ಯಪ್ಪರವರೊಂದಿಗೆ ಬನವಾಸಿಗೆ ಕೆಲಸಕ್ಕೆ ಹೋಗಿದ್ದೆ. ನಾನು ಅಲ್ಲಿಂದ ಶಿರಸಿ ಮತ್ತು ಬೇರೆ ಸ್ಥಳಗಳಿಗೆ ಹೋಗಿ ಕೆಲಸ ಮಾಡುತ್ತಿದ್ದೆ. ಬನವಾಸಿಯಿಂದ ನಮ್ಮ ಗ್ರಾಮಕ್ಕೆ 18 ಕಿ ಮೀ ಆಗುತ್ತದೆ. ಗಲಾಟೆಯ ವಿಚಾರವನ್ನು ಮಂಜಣ್ಣ ಮತ್ತು ನನ್ನ ಹೆಂಡತಿ ಹೇಳಿದ ಮೇಲೆ ನನಗೆ ಗೊತ್ತಾಗಿರುತ್ತದೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಆರೋಪಿತರು ನನ್ನ ಹೆಂಡತಿಯನ್ನು ಉದ್ದೇಶಿಸಿ ಬೈದರು ಎಂದು ಹೇಳಲಾದ ಸ್ಥಳ ಯಾವುದು ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ನಾನು ಹೇಳಬಲ್ಲೆ ಎಂದು ಹೇಳುತ್ತಾರೆ. ನಾನು ಆ ದಿವಸ ಊರಿನಲ್ಲಿಲ್ಲದ ಕಾರಣ ನನಗೆ ನಿಖರವಾಗಿ ಸದರಿ ಸ್ಥಳ ಯಾವುದು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

ಬಾವಿಯಲ್ಲಿ ನನ್ನ ಹೆಂಡತಿಯ ಶವವನ್ನು ಮೊದಲು ನಾನು ನೋಡಿರುತ್ತೇನೆ. ಆಗ ಸಮಯ ಬೆಳಿಗ್ಗೆ 7-00 ಗಂಟೆ ಆಗಿತ್ತು. ದಿಃ24-11-2021 ರಂದು ಸಂಜೆ 6-00 ಗಂಟೆಗೆ ಬಾವಿಯಲ್ಲಿ ನನ್ನ ಹೆಂಡತಿಯ ಶವ ಸಿಕ್ಕಿರುತ್ತದೆ ಎಂದರೆ ಸರಿಯಲ್ಲ . ಆ ದಿವಸ ನನ್ನ 3 ಜನ ಭಾವಂದಿರು ಮತ್ತು ಗ್ರಾಮದವರು ನನ್ನ ಹೆಂಡತಿಯ ಶವವನ್ನು ಇಟ್ಟುಕೊಂಡು ನ್ಯಾಯ ಪಂಚಾಯಿತಿ ಮಾಡಿದರು ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಪಂಚಾಯಿತಿಯಲ್ಲಿಯೂ ಸಹ ನಾನು ಮದ್ಯಪಾನ ಮಾಡಿಕೊಂಡು ಕುಳಿತುಕೊಂಡಿದ್ದೆ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ಹಿರಿಯರು ನನಗೆ ಮಕ್ಕಳು ಚಿಕ್ಕವರಿದ್ದಾರೆ ಎಂದು ಹೇಳಿ ನನ್ನ ಅಣ್ಣಂದಿರಿಗೆ 10-10 ಗುಂಟೆ ಜಮೀನನ್ನು ನನಗೆ ಕೊಡಬೇಕು ಎಂದು ತೀರ್ಮಾನ ಮಾಡಿದರು, ಆಗ ನನ್ನ ಅಣ್ಣಂದಿರು ನಾನು ಕುಡಿದು ಹಾಳು ಮಾಡುತ್ತೇನೆ, ಮಕ್ಕಳು ದೊಡ್ಡವರಾದ ಮೇಲೆ ಅವರಿಗೆ ಕೊಡುತ್ತೇವೆ ಎಂದು ಹೇಳಿದ್ದರಿಂದ ನಾನು ಮತ್ತು ನನ್ನ ಭಾವಂದಿರು ಅದನ್ನು ಒಪ್ಪದೇ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಅಜ್ಜಣ್ಣ, ರಮೇಶ ನಮ್ಮ ದಾಯಾದಿಗಳು ಎಂದರೆ ಸರಿ. ಮೊದಲಿನಿಂದಲೂ ಅಜ್ಜಣ್ಣ ಮತ್ತು ಆರೋಪಿತರ ನಡುವೆ ವೈಮನಸ್ಸು ಇದೆ ಎಂದರೆ ಸರಿ. ನಮ್ಮ ಗ್ರಾಮದಲ್ಲಿ ಚಾಸಾ17 ಪ್ರಶಾಂತ ಎಂಬುವವರು ಇರುತ್ತಾರೆ ಎಂದರೆ ಸರಿ. ಚಾಸಾ17, ಅಜ್ಜಣ್ಣ ಮತ್ತು ಪೋಲೀಸ್ ನಾಗರಾಜ್ ಸ್ನೇಹಿತರು ಎಂದರೆ ಅಜ್ಜಣ್ಣ ಮತ್ತು ಚಾಸಾ17 ಅಣ್ಣ ತಮ್ಮಂದಿರು ಎಂದು ಹೇಳುತ್ತಾರೆ.

ಬತಗಟ್ಟೆ ಗ್ರಾಮದಲ್ಲಿ ಬೇರೆ ಗ್ರಾಮದವರು ಬಂದು ಸಾಗುವಳಿ ಮಾಡುತ್ತಾರೆ ಎಂದು ಹೇಳಿ ನಮ್ಮ ಗ್ರಾಮದವರು ಎಲ್ಲರನ್ನು ಕರೆದುಕೊಂಡು ದೂರು ಕೊಡಲು ತಹಸಿಲ್ದಾರ್ ಬಳಿ

ಹೋಗಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ಸಂದರ್ಭದಲ್ಲಿ ನನ್ನ ಅಣ್ಣ 1 ನೇ ಆರೋಪಿ ಸಹ ಅವರ ಜೊತೆ ಹೋಗಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈಗಲೂ ಸಹ ಬತಗಟ್ಟೆ ಜಮೀನಿನಲ್ಲಿ ಚಾಸಾ17 ರವರು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಜಮೀನು ಸುಮಾರು 17-18 ಎಕರೆ ಇರುತ್ತದೆ ಎಂದರೆ ಸರಿ. ಆ ದಿವಸ ಚಾಸಾ17 ರವರು ನನ್ನ ಅಣ್ಣ 1 ನೇ ಆರೋಪಿ ಮತ್ತು ಇತರರನ್ನು ಜಮೀನು ಮಂಜೂರು ಮಾಡಿಸಲು ತಹಸಿಲ್ದಾರ್ ರವರ ಮುಂದೆ ಅರ್ಜಿ ಕೊಡಿಸುತ್ತೇನೆ ಎಂದು ಹೇಳಿ ಆಟೋದಲ್ಲಿ ಕರೆದುಕೊಂಡು ಹೋಗಿ, ತಹಸಿಲ್ದಾರ್ ರವರ ಮುಂದೆ ಅರ್ಜಿ ಕೊಡಿಸದೇ 107 ಪ್ರೊಸಿಡಿಂಗ್ಸ್ ನೋಟೀಸ್‌ಗೆ ಸಹಿ ಹಾಕಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿ ವಾಪಾಸ್ಸು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈಗಲೂ ಸಹ ಸದರಿ ಜಮೀನಿನಲ್ಲಿ ಚಾಸಾ17 ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ.

ನಾನು ನನ್ನ ಹೆಂಡತಿಯನ್ನು ಮದುವೆಯಾಗಬೇಕಾದರೆ ನನ್ನ ಭಾವಂದಿರು ನನಗೆ ಅಂಗಡಿ ಹಾಕಿಕೊಡುತ್ತೇವೆ ಎಂದು ಹೇಳಿದ್ದರು, ಆದರೆ ಅಂಗಡಿಯನು ಹಾಕಿಕೊಟ್ಟಿರುವುದಿಲ್ಲ. ನನ್ನ ಭಾವಂದಿರು ಅವರು ಒಪ್ಪಿಕೊಂಡ ಹಾಗೆ ಅಂಗಡಿ ಹಾಕಿಕೊಡದೇ , ನನ್ನ ಹೆಂಡತಿಯ ಸಾವನ್ನು ಮುಂದೆ ಇಟ್ಟುಕೊಂಡು ಜಮೀನಿನಲ್ಲಿ ನನಗೆ ಭಾಗ ಕೊಡಿಸಬೇಕು ಎಂದು ಹೇಳಿ ಆರೋಪಿತರ ವಿರುದ್ಧ ನನ್ನ ಕೈಯ್ಯಲ್ಲಿ ಸುಳ್ಳು ದೂರನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ.

ನಮ್ಮ ಮನೆಯ ಚಕ್ಕುಬಂದಿ ಹೇಳಬಲ್ಲೆ. ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಬೇರೆಯವರ ಮನೆ, ಉತ್ತರಕ್ಕೆ 1 ನೇ ಆರೋಪಿಯ ಮನೆ ಇರುತ್ತದೆ. ದಕ್ಷಿಣಕ್ಕೆ ಬಾವಿ ಮತ್ತು ಖಾಲಿ ಜಾಗ ಇರುತ್ತದೆ. ಬಂಗಾರಪ್ಪನವರ ಮನೆ ನಮ್ಮ ಮನೆಯ ಪಶ್ಚಿಮ ದಿಕ್ಕಿಗೆ ಇರುತ್ತದೆ.

ದಿನಾಂಕಃ 24-11-2021 ರಂದು ಸಂಜೆ 6-00 ಗಂಟೆಗೆ ಬಾವಿಯಲ್ಲಿ ಹೆಣ ಸಿಕ್ಕಿದಾಗ 1 ನೇ ಆರೋಪಿ ನನ್ನ ತಮ್ಮನ ಹೆಂಡತಿ ಎಂದು ಹೇಳಿ ಶವವನ್ನು ಎತ್ತಲು ಬಾವಿಯ ಹತ್ತಿರ ಬಂದಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಆ ಸಮಯದಲ್ಲಿ ಸಹ ಬನವಾಸಿಯಿಂದ ಮದ್ಯಪಾನ ಮಾಡಿಕೊಂಡು ಮನೆಗೆ ಬಂದಿದ್ದೆ ಎಂದರೆ ಸರಿಯಲ್ಲ.

ಸೊರಬ ನ್ಯಾಯಾಲಯದಲ್ಲಿ ದಾವೆ ಸಂಃ 113/2015 ಕೇಸ್ ನಡೆಯುತ್ತಿದೆ ಎಂದರೆ ಸಾಕ್ಷಿ ಅದು ಮುಗಿದಿರುತ್ತದೆ ಎಂದು ನುಡಿಯುತ್ತಾರೆ. ನಾವು ಅರ್ಜಿ ಹಾಕಿರುವುದರಲ್ಲಿ ಸರ್ವೆ ನಂಬರ್ ತಪ್ಪಾಗಿರುವುದರಿಂದ ನಮ್ಮ ಅರ್ಜಿ ತಿರಸ್ಕಾರ ಆಗಬಹುದು ಎಂದು ಹೇಳಿ ನಾವು 1 ನೇ ಆರೋಪಿಯ ಹೆಂಡತಿಯ ಹೆಸರಿನಲ್ಲಿ ಮಂಜೂರಾಗುವ ಜಮೀನಿನಲ್ಲಿ ಭಾಗ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದೂರನ್ನು ನಾನು ಪೋಲೀಸ್ ಠಾಣೆಯಲ್ಲಿ ಪೋಲೀಸರಿಗೆ ಹೇಳಿ ಬರೆಸಿರುತ್ತೇನೆ. ದೂರನ್ನು ಬರೆದ ಪೋಲೀಸರ ಹೆಸರು ನನಗೆ ಗೊತ್ತಿಲ್ಲ. ದೂರನ್ನು ಕೊಡುವ ಮೊದಲು ನಾವು ಶವವನ್ನು ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಇಟ್ಟು ಪೋಲೀಸ್ ಠಾಣೆಗೆ ಬಂದಿದ್ದೆವು

ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 1 ಮತ್ತು 2 ನೇ ಆರೋಪಿತರು ನನ್ನ ಹೆಂಡತಿಗೆ ಯಾವತ್ತೂ ಸಹ ಬೈದಿರುವುದಿಲ್ಲ, ಅವರು ನನ್ನ ಹೆಂಡತಿ ಜೊತೆ ಗೌರವದಿಂದ ನಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 3 ನೇ ಆರೋಪಿ 1 ಮತ್ತು 2 ನೇ ಆರೋಪಿಗೆ ನನ್ನ ಹೆಂಡತಿಯನ್ನು ಬೈಯಿರಿ ಎಂದು ಯಾವತ್ತೂ ಪ್ರಚೋಧನೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ಮನೆಯ ಹೊಸ್ತಿಲಿಗೂ ಮತ್ತು ಬಾವಿಗೆ 5 ಅಡಿ ದೂರ ಇರುತ್ತದೆ. ನನ್ನ ಹೆಂಡತಿ ಮರಣ ಹೊಂದಿದಳು ಎಂದು ಹೇಳಲಾದ ದಿವಸ ನನ್ನ ಮಕ್ಕಳು ಬೆಳಿಗ್ಗೆ 9 ಗಂಟೆಗೆ ಶಾಲೆಗೆ ಹೋಗಿರುತ್ತಾರೆ ಎಂದರೆ ಸರಿ. ಅವರು ಆ ದಿವಸ ಪ್ರತಿ ದಿನದಂತೆ ಸಂಜೆ 5 ರಿಂದ 5-30 ಗಂಟೆಗೆ ಮನೆಗೆ ಬಂದಿರುತ್ತಾರೆ ಎಂದರೆ ಸರಿ. ಈ ಮಧ್ಯೆ ನನ್ನ ಹೆಂಡತಿಯನ್ನು ಹೊರತುಪಡಿಸಿ ನಾನು ಮತ್ತು ನನ್ನ ಮಕ್ಕಳು ಮನೆಯಲ್ಲಿ ಇರಲಿಲ್ಲ ಎಂದರೆ ಸರಿ. ಮಹಜರ್ ದಾಖಲೆಗಳಿಗೆ ನನ್ನ ಜೊತೆ ಕೆರಿಯಪ್ಪ , ಮಂಜಪ್ಪ ಸಹಿ ಹಾಕಿರಬಹುದು. ಬಾವಿಯ ಹತ್ತಿರ ಮಾಡಿದ ಮಹಜರ್ ದಾಖಲೆಗೆ ನನ್ನ ಜೊತೆ ಯಾರು ಸಹಿ ಹಾಕಿದರು ಎಂದು ಗೊತ್ತಿಲ್ಲ. ನಮ್ಮ ಮನೆಗೆ ಪೋಲೀಸರು ಬಂದು ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಮತ್ತು ನಾನು ನಮ್ಮ ಮನೆಯ ಬಳಿ ಯಾವುದೇ ಮಹಜರ್ ದಾಖಲೆಗೆ ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ದಾಖಲೆಗೆ ನಾನು ಶವ ಪಂಚನಾಮೆ ಮಾಡುವ ಸಮಯದಲ್ಲಿ ಮತ್ತು ಪೋಲೀಸ್ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಹೆಂಡತಿಗೆ ಯಾವುದೇ ಕಿರುಕುಳ ನೀಡಿರುವುದಿಲ್ಲ ಮತ್ತು ಬೈದಿರುವುದಿಲ್ಲ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸುಮಾರು 18 ವರ್ಷದಿಂದ 3 ನೇ ಆರೋಪಿ ಸಾಗರದಲ್ಲಿದ್ದಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 3 ನೇ ಆರೋಪಿ ಸಾಗರಕ್ಕೆ ಯಾವಾಗ ಬಂದ ಎಂದು ನನಗೆ ಗೊತ್ತಿಲ್ಲ. 3 ನೇ ಆರೋಪಿ ಸಾಗರದಲ್ಲಿ ವಾಸ ಮಾಡುವ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಸಹ ಆತನ ಹೆಸರನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಸಾವಿನಿಂದ ಲಾಭ ಪಡೆಯುವ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೆ ಆಗದೇ ಇರುವ ದಾಯಾದಿಗಳು ನನಗೆ ಕುಮ್ಮಕ್ಕು ನೀಡಿ ಅವರ ವಿರುದ್ಧ ಸುಳ್ಳು ಸಾಕ್ಷಿ ಹೇಳಿಸುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).